

## ಸೋಲಿನಲ್ಲೂ ಗೆಲುವು

**ಅಕ್ಟೋಬರ್** 5ರಿಂದ ನವೆಂಬರ್ 19ರವರೆಗೆ ನಡೆದ ಏಕದಿನ ಪಂದ್ಯಗಳ 'ಐಸಿಸಿ ಪುರುಷರ ವಿಶ್ವಕಪ್ ಪಂದ್ಯಾವಳಿ' ಭಾರತದ ಕ್ರಿಕೆಟ್‌ಪ್ರಿಯರ ನೆನಪಿನ ಪುಟಗಳಲ್ಲಿ ಅಚ್ಚಳಿಯದೆ ಉಳಿಯುವಂತಹದ್ದು. ಆಸ್ಟ್ರೇಲಿಯಾ ತಂಡ ಪಂದ್ಯಾವಳಿಯನ್ನು ಗೆದ್ದುಕೊಂಡರೂ, ಭಾರತೀಯ ತಂಡ ಕ್ರೀಡಾಪ್ರಿಯರ ಮನಸ್ಸುಗಳನ್ನು ಗೆದ್ದುಕೊಂಡಿತು.

ಲೀಗ್ ಹಂತದಲ್ಲಿ ಭಾರತದ್ದು ಅಜೇಯ ಓಟ. ಫೈನಲ್‌ಗೆ ಮುನ್ನ ಎಲ್ಲ ಒಂಬತ್ತು ಪಂದ್ಯಗಳನ್ನು ಗೆದ್ದಿದ್ದ ಭಾರತ ಅಪಾರ ಆತ್ಮವಿಶ್ವಾಸದಿಂದ ಫೈನಲ್ ಪ್ರವೇಶಿಸಿತ್ತು. ಬೌಲಿಂಗ್ ಹಾಗೂ ಬ್ಯಾಟಿಂಗ್–ಎರಡೂ ವಿಭಾಗಗಳಲ್ಲಿ ರೋಹಿತ್ ಶರ್ಮಾ ನೇತೃತ್ವದ ತಂಡದ ಪ್ರದರ್ಶನ ಅತ್ಯುತ್ತಮವಾಗಿತ್ತು. ಲೀಗ್ ಹಂತದಲ್ಲಿ ಆಸ್ಟ್ರೇಲಿಯಾವನ್ನು ಮಣಿಸಿದ್ದ ಭಾರತ ತಂಡದ ಸಾಧನೆ ಫೈನಲ್‌ನಲ್ಲೂ ಮರುಕಳಿಸುತ್ತದೆಂದು ಕೋಟ್ಯಂತರ ಅಭಿಮಾನಿಗಳು ನಿರೀಕ್ಷಿಸಿದ್ದರು. ಇತ್ತೀಚಿನ ವರ್ಷಗಳಲ್ಲಿ ಮರೀಚಿಕೆಯಾಗಿದ್ದ 'ಐಸಿಸಿ ಪ್ರಶಸ್ತಿ' ಈ ಬಾರಿ ಒಲಿಯುತ್ತದೆಂದು ಭಾವಿಸಲಾಗಿತ್ತು. ಲೆಕ್ಕಾಚಾರ ಹುಸಿಯಾದರೂ, ಆಟಗಾರರ ಸಾಧನೆ ಕ್ರೀಡಾಪ್ರೇಮಿಗಳ ಮೆಚ್ಚುಗೆಗೆ ಪಾತ್ರವಾಯಿತು.




### ಮೀಸಲಿಗೆ ನ್ಯಾಯ ಸಿಗಲಿಲ್ಲ

ಪರಿಶಿಷ್ಟರ ಜನಸಂಖ್ಯಾವಾರು ಮೀಸಲಾತಿ ಹಂಚಿಕೆಗೆ ಸಂಬಂಧಿಸಿದಂತೆ ಕಳೆದ ವರ್ಷ ತೆಗೆದುಕೊಂಡ ಸರ್ಕಾರದ ನಿರ್ಣಯ ಗಮನಾರ್ಹ. ಅದರ ಸಾಧಕ–ಬಾಧಕ ಏನೇ ಇರಲಿ, ರಾಜಕೀಯೇತರವಾಗಿ ಇಚ್ಛಾಶಕ್ತಿಯಿಂದ ವ್ಯವಸ್ಥೆ ದೃಢ ನಿರ್ಧಾರ ತೆಗೆದುಕೊಂಡಿದ್ದರೆ ವಂಚಿತ ಸಮುದಾಯಗಳು ಮತ್ತೆ ಬೀದಿಗಿಳಿಯುವ ಪರಿಸ್ಥಿತಿ ಬರುತ್ತಿರಲಿಲ್ಲ. ಮಾಧ್ಯಮಗಳು, ಒಳಮೀಸಲು ಸಂಗತಿಯನ್ನು ಜೇನುಗೂಡಿಗೆ ಕೈ ಹಾಕಿದಂತೆ ಎಂಬ ಅಭಿಪ್ರಾಯವನ್ನು ರೂಪಿಸುವಂತೆ ವಿಶ್ಲೇಷಣೆ ಮಾಡಿದ್ದವು. ಅಂತಹ ಮಿತಿಗಳನ್ನು ದಾಟಿ ಅದಕ್ಕೆ ಸಮರ್ಪಕ ನೀತಿಯನ್ನು ರೂಪಿಸಬೇಕಿತ್ತು.

ತರಾತುರಿಯಲ್ಲಿ ಮೀಸಲಿನ ಹೆಚ್ಚಳ ಹಾಗೂ ಒಳಮೀಸಲಿನ ವರ್ಗೀಕರಣ ಎಂದು ಒಂದು ಪಟ್ಟಿಯನ್ನು ಕೇಂದ್ರಕ್ಕೆ ಹೊತ್ತುಹಾಕಿದರೇ ವಿನಃ ಅದಕ್ಕೆ ಸಾಂವಿಧಾನಿಕ ಪರಿಹಾರವನ್ನು ಕಂಡುಕೊಳ್ಳಲಿಲ್ಲ. ಅದರ ಪರಿಣಾಮ ಮೀಸಲು ಸಂಬಂಧಿ ಹೋರಾಟಗಳು ಇನ್ನೂ ಹೆಚ್ಚಾಗಿವೆ. ಒಂದು ವೇಳೆ ಕಳೆದ ವರ್ಷ ತೆಗೆದುಕೊಂಡ ಆ ನಿರ್ಣಯವನ್ನು ಸಮಾಜಶಾಸ್ತ್ರೀಯ ಇಲ್ಲವೇ ಕುಲಶಾಸ್ತ್ರೀಯ ಅಧ್ಯಯನದ ನೆಲೆಯಲ್ಲಿ ರೂಪಿಸಿದ್ದರೆ, ಕಳೆದ ಮೂವತ್ತು ವರ್ಷಗಳಿಂದ ನಡೆಯುತ್ತಿರುವ ಮೀಸಲು ಸಂಬಂಧಿ ಚಳವಳಿಗೆ ಒಂದು ನ್ಯಾಯ ಸಿಕ್ಕಂತೆ ಆಗುತ್ತಿತ್ತು. ಹಗಲಿರುಳು ಜನಸಂಘಟನೆಯಲ್ಲಿ ತೊಡಗಿರುವ ಹೋರಾಟಗಾರರೂ ನಿಟ್ಟುಸಿರುಬಿಡುತ್ತಿದ್ದರು.

–ಗುರುಪ್ರಸಾದ್ ಕಂಟಲಗೆರೆ
ಶಿಕ್ಷಕ–ಕಥೆಗಾರ

### ಸಲಿಂಗಿಗಳ ಬಂಧಕ್ಕಿಲ್ಲ 'ಮದುವೆ'ಯ ಮೊಹರು

**ಸಲಿಂಗಿಗಳ** ವಿವಾಹ ಕಾನೂನುಬದ್ಧಗೊಳಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದ್ದು ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದಂತೆ 2023ರಲ್ಲಿನ ಮಹತ್ವದ ವಿದ್ಯಮಾನ. ಸಲಿಂಗಿಗಳ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಲು ಸರ್ಕಾರ ನಿರಾಕರಿಸಿರುವುದನ್ನು ವಿರೋಧಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಸಲಿಂಗ ವಿವಾಹದ ಕಾನೂನು ಮಾನ್ಯತೆಯನ್ನು ನಿರ್ಧರಿಸುವುದು ಸಂಸತ್‌ಗೆ ಬಿಟ್ಟ ಸಂಗತಿ ಎಂದು ಹೇಳಿದೆ.

ಸಲಿಂಗ ವಿವಾಹಗಳಿಗೆ ಕಾನೂನು ಮಾನ್ಯತೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದ್ದರೂ, ಸಲಿಂಗ ಸಂಬಂಧದಲ್ಲಿರುವ ವ್ಯಕ್ತಿಗಳ ಸಂಬಂಧವನ್ನು ಮದುವೆ ಎಂಬ ಕಾನೂನಾತ್ಮಕ ಪರಿಗಣನೆ ಇಲ್ಲದೆಯೂ ಪರಿಶೀಲಿಸಲು ಸಮಿತಿಯೊಂದನ್ನು ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಲು ಒಪ್ಪಿಕೊಂಡಿದೆ.

ಸುಪ್ರೀಂ ಕೋರ್ಟ್ ತೀರ್ಮಾನದ ಬಗ್ಗೆ ಲಿಂಗತ್ವ ಅಲ್ಪಸಂಖ್ಯಾತರು ತೀವ್ರ ನಿರಾಶೆಯನ್ನು ವ್ಯಕ್ತಪಡಿಸಿದ್ದಾರೆ. ಲಿಂಗತ್ವ ಸಮುದಾಯವನ್ನು ಪ್ರಾಂಜಲವಾಗಿ ಒಪ್ಪಿಕೊಳ್ಳುವ ಮನಸ್ಥಿತಿ ಸಮಾಜಕ್ಕೆ ಇನ್ನೂ ಬಂದಿಲ್ಲ ಎನ್ನುವುದಕ್ಕೂ ಈ ವಿದ್ಯಮಾನ ಉದಾಹರಣೆಯಂತಿದೆ.

